ಅವರು ನನಗೊಂದಿಷ್ಟು ಪುಸ್ತಕ ಕೊಟ್ಟಿದ್ರು, ಅವನ್ನು ಓದಿಕೊಂಡಿದ್ದೆ.

ಕಲಾಮಂದಿರದಲ್ಲಿ ಐದು ವರ್ಷಗಳ ಅಭ್ಯಾಸದಲ್ಲಿ ನನಗೆ ಒಳ್ಳೆಯ ಗುರುಗಳು ಸಿಕ್ಕಿದ್ದರು. ಮೊದಲು ಅರಸು ಅಂತ ಒಬ್ಬರು ಎರಡು ವರ್ಷ ಇದ್ದರು. ಪ್ರಕಾಶ ಅಂತ ಇನ್ನೊಬ್ಬರು. ಆ ಐದುವರ್ಷಗಳ ಕಾಲ ಮತ್ತು ಈಗಲೂ ನನ್ನ ಗುರುಗಳು ಅಂತ ತಿಳಿದುಕೊಂಡಿರುವುದು ರಾಜು ಮಾಸ್ಟರ್ ಅನ್ನು. ಅವರು ನನ್ನ ಬದುಕಿನ ಒಂದಿಷ್ಟು ತಿರುವುಗಳಿಗೆ ಕಾರಣರಾದವರು. ಈಗ ಯೋಗರಾಜ್ ಭಟ್ ಮತ್ತು ಜಯಂತ ಕಾಯ್ಕಿಣಿ ಅಂತಹ ಆಪ್ತರ ಸಾಲಿಗೆ ಸೇರಿದವರು. ಅವರು ಗುರುಗಳು, ಸ್ನೇಹಿತರು, ಅಪಾಪೋಲಿಗಳು ಎಲ್ಲವೂ ಹೌದು. ಯಾವ ಕೆಟಗರಿಗೆ ಬೇಕಾದ್ರೂ ಕೂಡಿಸಬಹುದು ಅವರನ್ನು. ನನ್ನಂಥವರ ಬದುಕನ್ನು ಒಂದು ಹದಕ್ಕೆ ತಂದವರು.

● **ಇಂದಿನ ಕನ್ನಡ ಸಿನಿಮಾ ಸನ್ನಿವೇಶದ ಬಗ್ಗೆ ಏನನಿಸುತ್ತದೆ?**

ನಾವು ಕೊಂಚ ಹಿಂದಕ್ಕೆ ನೋಡಬೇಕು. ವಿಷ್ಣುವರ್ಧನ್, ಅಂಬರೀಶ್ ಅವರೆಲ್ಲ ವರ್ಷಕ್ಕೆ ಎಷ್ಟು ಸಿನಿಮಾ ಮಾಡ್ತಿದ್ರು ಎಂದು ನೋಡಿದರೆ ಹೆದರಿಕೆಯಾಗಿಬಿಡತ್ತೆ. ಆ ಕಾಲಘಟ್ಟದಲ್ಲಿ ಒಂದು ವರ್ಷಕ್ಕೆ ಒಬ್ಬ ಹೀರೊ ಎಂಟು–ಒಂಬತ್ತು ಸಿನಿಮಾ ಹೇಗೆ ಮಾಡ್ತಿದ್ದ? ಇವತ್ತು ಇಷ್ಟು ಫಾಸ್ಟ್ ತಂತ್ರಜ್ಞಾನ ಇದೆ. ಸೌಕರ್ಯ ಇದೆ. ಡಿಜಿಟಲ್ ಆಗಿದೆ. ಆದರೆ ಇಂದಿನ ಹೀರೊಗಳಿಗೆ ಅದು ಯಾಕೆ ಸಾಧ್ಯ ಆಗ್ತಿಲ್ಲ?

ನನಗೆ ಚೆನ್ನಾಗಿ ನೆನಪಿದೆ. ಒಂದು ಕಡೆ ಅಂಬರೀಶ್ ಅವರ ಸಾಲು ಸಾಲು ಸಿನಿಮಾಗಳು, ಮತ್ತೊಂದು ಕಡೆ ವಿಷ್ಣು ಸಿನಿಮಾಗಳು, ಇನ್ನೊಂದೆಡೆ ರಾಜ್‌ಕುಮಾರ್ ಸಿನಿಮಾಗಳು, ಮತ್ತೆ ಶಂಕರ್‌ನಾಗ್ ಸಿನಿಮಾಗಳು... ಸಿನಿಮಾ ಸಿನಿಮಾ ಸಿನಿಮಾ... ಅದರ ಮಧ್ಯೆ ಚಿರಂಜೀವಿ... ಎಲ್ಲ ಸಿನಿಮಾಗಳೂ ಗಲಾಟೆಮಯ... ಅದೆಷ್ಟು ಪೈಪೋಟಿ...

ಯಾರೋ ಹೇಳ್ತಾರೆ, ಇವತ್ತು ಸಿನಿಮಾ ಪೈಪೋಟಿ ಹೆಚ್ಚಾಗಿದೆ, ವಾರಕ್ಕೆ ಎಂಟು ಸಿನಿಮಾ ಬಿಡುಗಡೆ ಆಗ್ತಿದೆ ಅಂತೆಲ್ಲ... ಸಾರಿ, ಇವತ್ತು ಪೈಪೋಟಿ ಇಲ್ಲಾರೀ... ಅವತ್ತಿನ ಪೈಪೋಟಿಯ ಒಂದಂಶವೂ ಇಂದಿಲ್ಲ. ಯಾಕೆಂದರೆ ತಮಗನಿಸಿದ್ದನ್ನು ಯಾರೂ ಮಾಡ್ತಿಲ್ಲ. ಬರೀ ಚರ್ಚೆಗಳು ನಡೀತಿವೆ. ಆಗ ಎಷ್ಟು ಜನ ಒಳ್ಳೆಯ ಬರಹಗಾರರಿದ್ದರು. ಕುಣಿಗಲ್ ನಾಗಭೂಷಣ, ಚಿ. ಉದಯಶಂಕರ್, ಹಂಸಲೇಖ... ಈಗ ನನಗೆ ಅಂಥ ಒಬ್ಬ ಬರಹಗಾರನನ್ನು ತೋರಿಸಿ ನೋಡೋಣ.

● **ಕನ್ನಡ ಸಿನಿಮಾಗಳಲ್ಲಿ ನಿರ್ದೇಶಕರ ಒಂದು ಪರಂಪರೆ ಇದೆ. ಪುಟ್ಟಣ್ಣ, ಎನ್. ಲಕ್ಷ್ಮೀನಾರಾಯಣ್, ಕಾಸರವಳ್ಳಿ ಹೀಗೆ... ನಿಮ್ಮನ್ನು ಯಾರ ಜತೆಯಲ್ಲಿಯೂ ಇಟ್ಟು ನೋಡೋಕೆ ಸಾಧ್ಯ ಇಲ್ವಲ್ಲಾ... ಒಂಥರ ಗುಂಪಿಗೆ ಸೇರದ ಪದದ ಥರಾನೇ ಕಾಣ್ತೀರಿ...**

ನೀವು ಹೇಳಿದ ಎಲ್ಲರೂ ಒಟ್ಟಿಗೇ ಊಟ ಮಾಡಿದರೂ ನಮ್ಮ ಎಲೆ ಬೇರೆ, ಅವರ ಎಲೆ ಬೇರೆಯೇ. ಅವರ ಬದುಕು, ಸಂಬಂಧಗಳು ಬೇರೆ. ನನ್ನ ಬದುಕು, ನನ್ನ ಸೆಕ್ಸು, ನನ್ನ ಸಂಬಂಧಗಳು ಬೇರೆಯೇ... ನನ್ನ ದೃಷ್ಟಿಕೋನವೇ ಬೇರೆ. ಇಲ್ಲಿ ಒಂದೇ ಥರ ಇರೋಕೆ ಸಾಧ್ಯವೇ ಇಲ್ಲ.

● **ನಿಮ್ಮ ಸಿನಿಮಾಗಳನ್ನು ನೋಡಿದರೆ ಒಂದು ಕಂಫರ್ಟ್ ಜೋನ್‌ನಿಂದ ತಪ್ಪಿಸಿಕೊಳ್ಳಲು ಸದಾ ಹಪಹಪಿಸುತ್ತಿರುವ ಹಾಗೆ ಕಾಣಿಸುತ್ತೀರಿ?**

ನನಗೆ ಸಿನಿಮಾ ಮಾಡೋದು ಗೊತ್ತು. ಒಂದು ರೂಪಾಯಿ ಹಾಕಿದ್ರೆ ಎರಡು ರೂಪಾಯಿ